ಈ ವೈರುಧ್ಯವೇ ಕಲೆಗೆ ವಸ್ತು. ನನ್ನ ಪ್ರಕಾರ ಮ್ಯೂಸಿಯಂ ಅಂತಂದರೆ ಈಗ ಏನು ನೋಡುತ್ತಿದ್ದೇವೆ ಅಷ್ಟು ಮಾತ್ರ ಅಲ್ಲ. ಅದು ಪಾಸ್‌ಪೋರ್ಟ್ ಸೈಜ್ ಫೋಟೊಗ್ರಫಿ ಆಫ್ ದ ಕಂಟ್ರಿ. 'ಮ್ಯೂಸಿಯಮ್ಸ್ ನಾನ್ ವರ್ಬಲ್ ಲ್ಯಾಂಗ್ವೇಜ್: ಮಲ್ಟಿಡಿಸಿಪ್ಲಿನರಿ ಎಪ್ರೋಚ್ ಇನ್ ಎಕ್ಸಿಬಿಶನ್ ಡಿಸೈನ್' ಅಂತ ನಾನು ಎಂ.ಎ.ನಲ್ಲಿ ಪ್ರಬಂಧ ಬರೆದಿದ್ದೆ. ಅದರಲ್ಲಿ ನೂರು ಪ್ರಶ್ನೆಗಳನ್ನು ಸಿದ್ಧ ಮಾಡಿದ್ದೆ. ಆ ಪ್ರಶ್ನೆ ನೀವು ವಸ್ತುವಿಗೆ ಕೇಳಿದ್ರೆ, ಇಟ್‌ಸೆಲ್ಫ್ ವಿಲ್ ಟೆಲ್ ಯು ವಾಟ್ ಟು ಎಕ್ಸ್‌ಪ್ಲೈನ್. ವಸ್ತು ಮ್ಯೂಸಿಯಂನಲ್ಲಿ ಇನ್ನು ನೂರಾರು ವರುಷ ಉಳಿಯುತ್ತೆ. ಅದನ್ನ ಕ್ಯೂರೇಟರ್ ಪ್ರತೀ ಸಲ ಬೇರೆ ಬೇರೆ ಸನ್ನಿವೇಶದಲ್ಲಿ ತೋರಿಸಬೇಕು. ಮೈಕ್ರೊ ಅಥವಾ ಮ್ಯಾಕ್ರೊ ವಿವರವನ್ನು ವಿವರಿಸಬೇಕು. ಹೀಗೆ ವಿಮರ್ಶೆ ಮಾಡಲು, ವೈರುಧ್ಯವನ್ನು ಗುರುತಿಸಲು ಮ್ಯೂಸಿಯಂಗಳು ಸಹಾಯ ಮಾಡುತ್ತವೆ. ಜೊತೆಗೆ ತುಂಬ ಜನ ಭಾರತ ಒಂದು ತರಹ ಲಿವಿಂಗ್ ಮ್ಯೂಸಿಯಂ ಎಂದೂ ಕರೆದಿದ್ದಾರೆ.

**◆ ಲೇಖಕರಿಗೆ ಸಾಮಾನ್ಯವಾಗಿ ಸ್ಪಾನ್ಸರ್‌ಶಿಪ್ ಇರಲ್ಲ. ಆದರೆ, ಪ್ರದರ್ಶನ ಕಲೆಗಳಾದ ಪೇಂಟಿಂಗ್ಸ್ ಅಥವಾ ಶಿಲ್ಪಗಳಲ್ಲಿ ದೊಡ್ಡ ಮೊತ್ತದ ಹಣ ಹೂಡಬೇಕಾಗುತ್ತೆ. ಇವು ಪ್ರದರ್ಶನವಾಗುವ ಮ್ಯೂಸಿಯಂಗಳು ಅಥವಾ ಅಲಂಕೃತವಾಗುವ ಕಾರ್ಪೊರೇಟ್ ಆಫೀಸುಗಳು ಕೂಡ ಪ್ರತಿಷ್ಠಿತ ಜಾಗಗಳು. ಆದರೆ, ಈ ಕಲಾಕೃತಿಗಳಲ್ಲಿ ಮನುಷ್ಯರ ನೋವು ವಸ್ತು. ಕಲಾಕೃತಿಯ ಸೃಷ್ಟಿ ಮತ್ತು ಪ್ರದರ್ಶನಕ್ಕೆ ಅಧಿಕಾರಸ್ಥ ಶಕ್ತಿಗಳನ್ನು ಅವಲಂಬಿಸಬೇಕಾಗಿರೊ ಸಂದರ್ಭದಲ್ಲಿ ಕಲಾವಿದರು ಈ ವೈರುಧ್ಯವನ್ನು ಹೇಗೆ ಎದುರಿಸುವರು?**

ನೀವು ಹೇಳಿದ ಬಿಕ್ಕಟ್ಟು ಇದೆ. ಅದನ್ನ ಹೇಗೆ, ಎಷ್ಟು ಎಡಿಟ್ ಮಾಡಬೇಕು ಅನ್ನೋದು ಪ್ರತಿಯೊಬ್ಬರ ವೈಯಕ್ತಿಕ ನಂಬಿಕೆಗೆ ಬಿಟ್ಟಂತಹುದು. ನೀವು ಆಹಾರವನ್ನು ತಯಾರಿಸುವಾಗ ಗಿಡಗಳಿಗೆ ನೋವು ಮಾಡುತ್ತೀರೊ ಅಥವಾ ಪ್ರಾಣಿಗಳಿಗೆ ನೋವು ಮಾಡ್ತುತೀರೊ? ನೀವು ಎಷ್ಟು ಪರ್ಸೆಂಟ್ ಕಾಂಪ್ರಮೈಸ್ ಮಾಡ್ಕೊಬೇಕು ಅನ್ನೋದು ಮುಗಿಯದ ಚರ್ಚೆ. ಯಾವ ಬ್ಯಾನರಿನ ಕೆಳಗಡೆ ನೀವು ಕೆಲಸ ಮಾಡಬೇಕು ಅಥವಾ ಮಾಡಬಾರದು, ಯಾವುದನ್ನು ಚಾಯ್ಸ್ ಮಾಡಬೇಕು ಅನ್ನೋದು ನಮ್ಮಲ್ಲಿರುತ್ತದೆ. ಈ ವೈರುಧ್ಯ ಇರುವ ಏರಿಯಾವನ್ನು ಎತ್ತಿಕೊಂಡು, ಅದರ ಯಾವೊಂದು ಆಂಗಲ್ಲೇ ಕಲಾಕೃತಿಗೆ ವಸ್ತುವಾಗಿರುತ್ತದೆ. ಅವರ ಮನೆಯಲ್ಲಿ, ಅವರ ಬೆಡ್‌ರೂಮಿನಲ್ಲಿ ಎದುರಿಗೆ ಅದು ಕಾಣಿಸುತ್ತಿರುತ್ತೇವೆ. ಅದೊಂದು ರೀತಿಯಲ್ಲಿ ನೀವು ತೆಗೆದುಕೊಳ್ಳುವ ಸಬ್‌ವರ್ಶನ್ ಇರಬಹುದು. ಈ ಎಚ್ಚರ ಇದ್ದುಕೊಂಡು ಕಾರ್ಯಕ್ರಮ ಮಾಡುವುದು ಸೂಕ್ತ. ಈ ಪ್ರಜ್ಞೆ ಇಲ್ಲದೆ ಒಂದು ಕಲಾಕೃತಿಗಳನ್ನು ತಯಾರು ಮಾಡುವುದು ಇನ್ನೊಂದು ದುರದೃಷ್ಟ. ನೂರಾರು ವರುಷದ ಇತಿಹಾಸ ಇರುವಂತಹ ಒಂದು ವ್ಯವಸ್ಥೆಗೆ, ಚಾಲೆಂಜ್ ಮಾಡಿದರೆ ವರ್ಕ್ ಆಗುತ್ತಾ ಇಲ್ಲವಾ ಅನ್ನುವ ಸಂಶಯ ಇದೆ.

**◆ ಇಂತಹ ವೈರುಧ್ಯವನ್ನು ಯಾರಾದರೂ ವಿಶಿಷ್ಟವಾಗಿ ಮುಖಾಮುಖಿ ಮಾಡಿದ್ದಾರಾ?**

ಶೂ ತಯಾರಿಕೆಯ ನೈಕ್ ಕಂಪನಿ ನೆದರ್‌ಲ್ಯಾಂಡ್ಸ್‌ನಲ್ಲಿ ಆಮಸ್ಟರ್ ಡ್ಯಾಮಿನ ಮಧ್ಯದಲ್ಲಿ ಬಿಲ್ಡಿಂಗನ್ನು ಮಾಡಬೇಕು ಅಂತ ಹೇಳಿ, ಹೊಂಚುಹಾಕಿತ್ತು. ಆವಾಗ ಒಬ್ಬ ಕಲಾವಿದನಿಗೆ ಈ ವಿಷಯ ಗೊತ್ತಾಯಿತು. ಅವನು ಅದನ್ನು ವಿಡಂಬನೆ ಮಾಡುತ್ತ ಅಲ್ಲಿ 'ಇಲ್ಲಿ ಹೊಸ ಕಟ್ಟಡ ಬರಲಿದೆ' ಎಂದು ಅವನೇ ಜಾಹೀರಾತನ್ನು ಹಾಕಿದ. ಆವಾಗ ಜನ ಒಂದಾಗಿ ಅದನ್ನ ಪ್ರೊಟೆಸ್ಟ್ ಮಾಡಿದ್ರು. ಆ ಕಾರ್ಪೊರೇಟ್ ಕಂಪೆನಿಯ ಏನೊಂದು ಹಿಡನ್ ಐಡಿಯಾ ನಿಧಾನಕ್ಕೆ ಮೆತ್ತಗೆ ಮಾಡ್ಬೇಕು ಅಂತ ಇತ್ತೊ, ಅದನ್ನ ಕಲಾವಿದ ಎಗ್ರೆಸಿವ್ ಆಗಿ ಆ ಜಾಗವನ್ನು ಕಬ್ಜಾ ಮಾಡದ ಹಾಗೆ ಮಾಡಿದ. ಈ ತರಹ ಕೆಲವರು ಕೌಂಟರ್ ಮಾಡಿದ್ದಾರೆ. ಆದರೆ, ಕಲಾವಿದರು ಈ ಬಗ್ಗೆ ಎಚ್ಚರವಾಗಿ ಇದ್ದುಕೊಂಡು ಏನು, ಎತ್ತ, ಎಷ್ಟು ಎನ್ನುವ ಸಮತೋಲನ ಇಟ್ಟುಕೊಂಡು ಕಲಾಕೃತಿ ರಚಿಸುವುದು ಮುಖ್ಯ.

**◆ ಬೆಂಗಳೂರಿನಲ್ಲಿ 'ಮ್ಯೂಸಿಯಂ ಆಫ್ ಆರ್ಟ್ ಆಂಡ್ ಫೋಟೊಗ್ರಫಿ' ('ಮ್ಯಾಪ್') ಸ್ಥಾಪನೆ ಆಗಿದೆ. ಅದರ ಅಗತ್ಯ ಏನು?**